ಆ ರೀತಿಯ ಅನುಭವ ಇರುವುದರಿಂದ ಆ ಕಮಿಟಿಯಲ್ಲಿ ಅವರುಗಳನ್ನು ತೆಗೆದುಕೊಂಡಿರುತ್ತೇವೆ. ಆ ಅನುಭವದ ಮೇಲೆ ಯಾರಿಗೆ ಎಷ್ಟು ಅನಿಷ್ಟ ವೇತನ ಯಾವ ಉದ್ಯೋಗಕ್ಕಾಗಿ, ಯಾವ ಕೆಲಸಕ್ಕಾಗಿ ಎಷ್ಟು ಕನಿಷ್ಟ ವೇತನವನ್ನು ಕೊಡಬೇಕೆಂದು ಅವರು ಶಿಫಾರಸ್ಸು ಮಾಡುತ್ತಾರೆಂದು ಒಂದು ಮಾತನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತೇನೆ.

ವಿಷಯ:- ಧಾರವಾಡದಲ್ಲಿ ಐ.ಟಿ.ಐ. ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 115 (1041)

ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ):- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಜಿಲ್ಲಾ ಕೇಂದ್ರವು ಉತ್ತರ ಕರ್ನಾಟಕದ ಪ್ರಮುಖ ಶೈಕ್ಷಣಿಕ ಕೇಂದ್ರವೆಂದು ಸರ್ಕಾರ ಪರಿಗಣಿಸಿದೆಯೇ?

ಆ) ಹಾಗಿದ್ದಲ್ಲಿ ಧಾರವಾಡದಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು?

ಶ್ರೀ ಪಿ.ಗುರುನಾಥ್ (ಕಾರ್ಮಿಕ ಸಚಿವರು):-

ಅ) ಹೌದು

ಆ) ಸದ್ಯಕ್ಕೆ ಇಲ್ಲ.

ಶ್ರೀ ಚಂದ್ರಕಾಂತ ಜಿ.ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯು ಶೈಕ್ಷಣಿಕ ಕ್ಷೇತ್ರ ಎನ್ನುವುದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಎರಡು ವಿಶ್ವವಿದ್ಯಾನಿಲಯ ಇರುವಂತಹ ಧಾರವಾಡ ಜಿಲ್ಲೆಯಲ್ಲಿ ಐ.ಟಿ.ಐ. ಶಾಲೆಯನ್ನು ಪ್ರಾರಂಭ ಮಾಡುತ್ತೇವೆಂದು ಸನ್ಮಾನ್ಯ ಮಂತ್ರಿಗಳು ನಮ್ಮ ಜೊತೆಯಲ್ಲಿಯೇ ಬಂದು ಕಟ್ಟಡದ ಪರಿಶೀಲನೆಯನ್ನು ಸಹ ಮಾಡಿಕೊಂಡು ಬಂದಿದ್ದೇವೆ. ಶಾಲೆಯನ್ನು ಪ್ರಾರಂಭಿಸುವುದಾಗಿ ಆಶ್ವಾಸನೆಯನ್ನು ಸಹ ನನಗೆ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಸದರಿ ಶಾಲೆಯನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಗುರುನಾಥ್ :- ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಹೇಳಿದಂತಹ ವಿಷಯ ನಿಜವಿದೆ. ಕಟ್ಟಡವು ಅಲ್ಲಿ ಇದ್ದರೂ ಸಹ ಐ.ಟಿ.ಐ. ಶಾಲೆಯಲ್ಲಿ ಪೀಠೋಪಕರಣ, ಸಿಬ್ಬಂದಿಯ ವರ್ಗ, ಯಂತ್ರೋಪಕರಣಗಳ ಅವಶ್ಯಕತೆ ಇದೆ. ಇದನ್ನು ಸರ್ಕಾರ ಮಾಡುವುದು ಅದು ಹೊಸ ಯೋಜನೆಯಲ್ಲಿದೆ. ಇದರ ಬಗ್ಗೆ ಸರ್ಕಾರ ಯೋಜನೆಯನ್ನು ಮಾಡುತ್ತಿದೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಅಲ್ಲಿಯ ಅಧಿಕಾರಿಗಳು ಕೂಡ ಬಹಳಮುತುವರ್ಜಿಯಿಂದ ಆ ಒಂದು ಕಟ್ಟಡವನ್ನು ಐ.ಟಿ.ಐ. ಶಾಲೆ ಪ್ರಾರಂಭಿಸಲು ಬಿಡಿಸಿಕೊಟ್ಟಿದ್ದಾರೆ. ಮಾನ್ಯ ಸಚಿವರನ್ನು ಕರೆದುಕೊಂಡು ಹೋಗಿ ಸಹ ತೋರಿಸಿದ್ದೇವೆ.

ಅಧ್ಯಕ್ಷರು:- ನೀವು ಮತ್ತು ಮಾನ್ಯ ಸಚಿವರು ಇಬ್ಬರು ಮೊದಲೇ ಮಾತನಾಡಿಕೊಂಡು ಬಂದಿರುತ್ತೀರಿ ಅವರು ಐ.ಟಿ.ಐ. ಶಾಲೆಯನ್ನು ಪ್ರಾರಂಭಿಸುತ್ತಾರೆ ಬಿಡಿ. ನೀವು ಕೇಳುವುದಕ್ಕೂ ರೆಡಿಯಾಗಿದ್ದೀರಿ ಅವರು ಮಾಡುವುದಕ್ಕೂ ತಯಾರಿದ್ದಾರೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಈ ವರ್ಷದಿಂದಲೇ ಐ.ಟಿ.ಐ. ಶಾಲೆಯನ್ನು

ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಕಟ್ಟಡ ರೆಡಿ ಇದೆ, ಆದರೆ ಪೀಠೋಪಕರಣಗಳು ಮತ್ತು ಸಿಬ್ಬಂದಿಗಳು ಇರುವುದಿಲ್ಲ.

ಅಧ್ಯಕ್ಷರು:- ಇವರು ಮೊದಲೇ ಹೋಗಿ, ವಹಿವಾಟುಗಳನ್ನು ಕುದುರಿಸಿಕೊಂಡು ಬಂದು ನಂತರ ಪ್ರಶ್ನೆಯನ್ನು ಹಾಕಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿದ್ದಂತಹ ಐ.ಟಿ.ಐ. ಶಾಲೆಯಲ್ಲಿ ಸಂದರ್ಶನ ನಡೆಯುವಂತಹ ಸಂದರ್ಭದಲ್ಲಿ ಸಂದರ್ಶನ ಕಮಿಟಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನಿರಾಶರಾಗಿ ಹೋಗಿದ್ದಾರೆ. ಆದಕಾರಣ ಧಾರವಾಡದಲ್ಲಿ ಐ.ಟಿ.ಐ. ಯನ್ನು ಸ್ಥಾಪಿಸುವುದು ಅತ್ಯಂತ ಅವಶ್ಯಕತೆ ಇದೆ. ಆದ್ದರಿಂದ ಈ ಕೈಗಾರಿಕಾ ತರಬೇತಿ ಕೇಂದ್ರವನ್ನು ಧಾರವಾಡದಲ್ಲಿ ಸ್ಥಾಪಿಸಲು ಮಾನ್ಯ ಮಂತ್ರಿಗಳು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಗುರುನಾಥ್:- ಇದನ್ನು ಪರಿಶೀಲನೆ ಮಾಡುತ್ತೇನೆ.

ವಿಷಯ: ಸಕಲೇಶಪುರ-ಆಲೂರು ತಾಲ್ಲೂಕಿನಲ್ಲಿ ಕೊಳವೆ ಬಾವಿಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 128(548)

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

1) ಸಕಲೇಶಪುರ-ಆಲೂರು ತಾಲ್ಲೂಕಿನಲ್ಲಿ ಕಳೆದ 9 ತಿಂಗಳಿಂದ ಕೊರೆಸಿರುವ ಕೊಳವೆ ಬಾವಿಗಳೆಷ್ಟು?

2) ಇವುಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯಾಧಿಕಾರಿ ಕೊರೆದಿರುವ ಕೊಳವೆ ಬಾವಿಗಳೆಷ್ಟು?

3) ಈ ಕೊಳವೆ ಬಾವಿಗಳನ್ನು ಕೊರೆಯಲು ನೀಡಿರುವ ಗುತ್ತಿಗೆದಾರರು ಹಾಗೂ ಅವರಿಗೆ ಇದುವರೆಗೂ ಪಾವತಿಯಾದ ಹಣವೆಷ್ಟು?

4) ಈ ಕೊಳವೆ ಬಾವಿಗಳನ್ನು ಗುತ್ತಿಗೆದಾರರಿಂದ ಕೊರೆಯಿಸಲಾಗಿದೆಯೇ? ಹಾಗಿದ್ದಲ್ಲಿ ಇದಕ್ಕೆ ಸರ್ಕಾರದ ಅನುಮತಿ ನೀಡಿದೆಯೇ?

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1) ಕಳೆದ 9 ತಿಂಗಳಿಂದ ಕೊರೆಸಿರುವ ಕೊಳವೆ ಬಾವಿಗಳ ಸಂಖ್ಯೆ: 52

ಸಕಲೇಶಪುರ ತಾಲ್ಲೂಕು	: 18
ಆಲೂರು ತಾಲ್ಲೂಕು	: 34
ಒಟ್ಟು	: 52

2) ಜಿಲ್ಲಾಧಿಕಾರಿಗಳಿಂದ ಕೊರೆಯಿಸಿದ ಕೊಳವೆ ಬಾವಿಗಳ ಸಂಖ್ಯೆ: ಇಲ್ಲ
ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ